ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 169-177
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಉಚ್ಚಂಗಿದುರ್ಗ ಕೋಟೆ ಪರಿಸರದ ಮಳೆಕೊಯ್ಲು ವ್ಯವಸ್ಥೆ

**ವಿನಯ್‌ಕುಮಾರ ಕೆ**

ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**Abstract:**
*ಭೂಮಿಯ ಮೇಲಿನ ಎಲ್ಲ ಜೀವಿಗಳಿಗೂ ನೀರು ಅಗತ್ಯವಾದ ಜೀವದ್ರವ್ಯ. ನೀರನ್ನು ಬಯಲು ಪ್ರದೇಶ, ಬೆಟ್ಟಗುಡ್ಡಗಳಲ್ಲಿನ ಇಳಿಜಾರುಗಳಲ್ಲಿ ಹಿಡಿದಿಡುವುದು ಕಷ್ಟ. ಆದ್ದರಿಂದ ಇದಕ್ಕೆ ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ಶೇಖರಣೆಯಾಗುವಂತೆ ಮಾಡಲು ನದಿಗಳಿಗೆ ಅಣ್ಣೆಕಟ್ಟುಗಳು, ಕೆರೆಗಳಿಗೆ ಏರಿಗಳು, ಕಂದಕಗಳಿಗೆ ಗೋಡೆಗಳು, ಕಾಲುವೆ, ಹೊಂಡಗಳಿಗೆ ಒಡ್ಡುಗಳು, ಕೊಳಗಳಿಗೆ ತಡೆಗಳನ್ನು ನಿರ್ಮಿಸಲಾಗಿದೆ. ಈ ಭಾಗಗಳಲ್ಲಿ ಸಾಮಾನ್ಯ ಪ್ರಮಾಣಕ್ಕಿಂತ ಹೆಚ್ಚಿನ ಮಟ್ಟದಲ್ಲಿ ನೀರನ್ನು ಶೇಖರಿಸಲು ಸಾಧ್ಯ. ಆಗ ಮಾನವನು ತನ್ನ ಅಗತ್ಯಗಳಿಗೆ ತಕ್ಕಂತೆ ನೀರಿನ ಅಭಾವ ಉಂಟಾದಾಗ ಮಳೆಯ ನೀರನ್ನು ಕೃತಕವಾಗಿ ಸಂಗ್ರಹಿಸಿಕೊಂಡು, ಜಲಕ್ಷಾಮ ಉಂಟಾಗದಂತೆ ಎಚ್ಚರ ವಹಿಸುತ್ತಿದ್ದ, ಇಂತಹ ಕೃತಕ ಜಲಸಂಗ್ರಹಾಗಾರಗಳನ್ನು ಪ್ರಾಗಿತಿಹಾಸಿಕ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿರುವ ವಿಜಯನಗರ ಪರಿಸರದಲ್ಲಿ ಕಾಣುತ್ತೇವೆ. ಇಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳು ಜಲಕ್ಷಾಮ ತಲೆದೋರದಂತೆ ಕಾಲ ಕಾಲಕ್ಕೆ ಅನೇಕ ದೊಣೆಗಳು, ಹೊಂಡಗಳು, ಕೊಳಗಳು, ಕೆರೆಗಳು ಮತ್ತು ಬಾವಿಗಳನ್ನು ನಿರ್ಮಾಣ ಮಾಡಿದ್ದಾರೆ.*

**Keywords:** *ಉಚ್ಚಂಗಿದುರ್ಗ ಕೋಟೆ, ಮಳೆಕೊಯ್ಲು, ಜಲಕ್ಷಾಮ, ಹೊಂಡಗಳು, ಕೊಳಗಳು, ಕೆರೆಗಳು*

## ಪೀಠಿಕೆ

ನೀರನ್ನು ಬಯಲು ಪ್ರದೇಶ ಮತ್ತು ಬೆಟ್ಟಗುಡ್ಡಗಳಲ್ಲಿ ಶೇಖರಿಸಲು ಅನುಕೂಲವಾಗುವಂತೆ ನಿರ್ಮಿಸಿದ ಒಡ್ಡುಗಳು, ಏರಿಗಳು ಹಾಗೂ ಅಣೆಕಟ್ಟುಗಳು ಬಲಿಷ್ಠವಾಗಿದ್ದವು. ನೀರು ಯಾವುದೇ ಕಾರಣಕ್ಕೂ ಸೋರಿಕೆಯಾಗದಂತೆ ಮತ್ತು ಪ್ರವಾಹ ಕಾಲದಲ್ಲಿ ಹಾಳಾಗದಂತೆ ನಿರ್ಮಿಸುವ ಅನಿವಾರ್ಯವಾಗಿತ್ತು. ಏಕೆಂದರೆ ಹಿಂದೆ ಕೊಳವೆ ಬಾವಿಗಳಿರಲಿಲ್ಲ. ಆದ್ದರಿಂದ ನೀರನ್ನು ವರ್ಷ ಪೂರ್ತಿ ಬಳಕೆಗೆ ಬರುವಂತೆ ಸಂಗ್ರಹಿಸಿಡುವುದು ಅನಿವಾರ್ಯವಾಗಿತ್ತು. ಇದು ನಾಗರಿಕತೆಯ ಉಗಮ ಕಾಲದಿಂದ, ಕೈಗಾರೀಕರಣದ ನಂತರದ ಕಾಲಾವಧಿಯವರೆಗೂ ಅನಿವಾರ್ಯವಾಗಿದೆ. ಹಿಂದೆ ಇಂದಿನಷ್ಟು ಆಧುನಿಕ ತಂತ್ರಜ್ಞಾನಗಳು ಇಲ್ಲವಾದರೂ, ಪ್ರಸ್ತುತ ಕಾಲದ ತಂತ್ರಜ್ಞಾನವನ್ನೇ ಬಳಸಿಕೊಂಡು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ನೀರನ್ನು ತಡೆದು ನಿಲ್ಲಿಸಿ ಬಳಸಿಕೊಂಡಿರುವುದು ಗಮನಾರ್ಹ. ಅವುಗಳಲ್ಲಿ ಪ್ರಮುಖವಾಗಿ ದೊಣೆಗಳು, ಬಾವಿಗಳು, ಕೆರೆಗಳು, ಹೊಂಡಗಳು, ಕೊಳಗಳು, ಕಾಲುವೆಗಳು, ಅಣೆಕಟ್ಟುಗಳು ಪ್ರಮುಖವಾಗಿವೆ.

***Please cite this article as:*** ವಿನಯ್‌ಕುಮಾರ, ಕೆ. (2026). ಉಚ್ಚಂಗಿದುರ್ಗ ಕೋಟೆ ಪರಿಸರದ ಮಳೆಕೊಯ್ಲು ವ್ಯವಸ್ಥೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 169–177

**ಮಳೆಕೊಯ್ಲು ಅರ್ಥ**

**ಮಳೆ:** ಸೂರ್ಯನ ಶಾಖವು ಸಾಗರಗಳು, ಸರೋವರಗಳು ಮತ್ತು ನದಿಗಳಿಂದ ನೀರನ್ನು ಆವಿಯಾಗಿಸುತ್ತದೆ. ಈ ಆವಿ ತೇವಾಂಶವಾಗಿ ವಾತಾವರಣಕ್ಕೆ ಏರಿ ತಾಪಮಾನ ಕಡಿಮೆಯಾದಗ ನೀರಿನ ಆವಿ ಹನಿಗಳಾಗಿ ಘನೀಕರಿಸುತ್ತದೆ. ಈ ಹನಿಗಳು ಒಟ್ಟಿಗೆ ಸೇರಿ ಮೋಡವಾಗಿ ಭೂಮಿಗೆ ಬೀಳುವ ನೀರಿನ ಹನಿಗಳೇ ಮಳೆ.

**ಕೊಯ್ಲು :** ಭೂಮಿಗೆ ಬಿದ್ದಂತಹ ಮಳೆ ನೀರನ್ನು ವ್ಯವಸ್ಥಿತವಾಗಿ ತಡೆಹಿಡಿಯುವುದೇ ಕೊಯ್ಲು

**ವ್ಯವಸ್ಥೆ :** ಮಳೆ ನೀರನ್ನು ವ್ಯವಸ್ಥಿತವಾಗಿ ಕೆರೆ, ಬಾವಿ, ಹೊಂಡ, ದೊಣೆಗಳ ಮೂಲಕ ಸಂಗ್ರಹಿಸುವುದು. ಮಳೆಕೊಯ್ಲು ಭೂಮಿಯ ಮೇಲೆ ಬೀಳುವ ಪ್ರತಿ ಹನಿಯನ್ನು ಸಂಗ್ರಹಿಸಿ ಬಳಸುವುದೇ ಆಗಿದೆ. ಓಡುವ ನೀರನ್ನು ನಡೆಯುವಂತೆ ನಡೆಯುವ ನೀರನ್ನು ತೆವಳುವಂತೆ ತೆವಳುವ ನೀರನ್ನು ನಿಲ್ಲುವಂತೆ ಮಾಡುವ ವ್ಯವಸ್ಥೆಯೇ ಮಳೆಕೊಯ್ಲು. ಮಳೆಯ ನೀರಿಗೆ ತಡೆಹಾಕಿ ನಿಲ್ಲಿಸುವ ಮೂಲಕ ಹೆಚ್ಚು ಕಾಲ ಬಳಸುವ ವ್ಯವಸ್ಥೆಯೇ ಮಳೆಕೊಯ್ಲು. ಭೂಮಿಯ ಮೇಲೆ ಬಿದ್ದ ಮಳೆಯ ನೀರಿಗೆ ತಡೆಯೊಡ್ಡುವುದೇ ಮಳೆಕೊಯ್ಲುನ ಮುಖ್ಯ ಧ್ಯೇಯ.

ಮಳೆಕೊಯ್ಲು ಮಳೆಯ ನೀರನ್ನು ದೊಣೆ, ಹೊಂಡ, ಕೆರೆಗಳ ಮೂಲಕ ತಡೆಯುವುದು ಮಾತ್ರವಲ್ಲ ಅದನ್ನು ಭೂಮಿಯಲ್ಲಿ ಇಂಗಿಸುವ ಆ ಮೂಲಕ ಇಂಗಿದ ನೀರನ್ನು ಬಾವಿ, ಕೊಳ ಮೂಲಕ ಪಡೆದು ಬಳಸುವ ಕ್ರಮವೇ ಆಗಿದೆ.

ಮಳೆನೀರು ಕೊಯ್ಲು ಎನ್ನುವುದು ಮಳೆಗಾಲದಲ್ಲಿ ಬೀಳುವ ಮಳೆನೀರನ್ನು ಸಂಗ್ರಹಿಸಿ ನೀರಿನ ಕೊರೆತೆಯ ಅವಧಿಯಲ್ಲಿ ಬಳಸುವುದು. ಸಾಮಾನ್ಯವಾಗಿ ಹೇಳುವುದಾದರೆ ಇದು ಮಾನವನ ಬಳಕೆಗಾಗಿ ಮಳೆನೀರನ್ನು ಹಿಡಿದು, ಕೂಡಿಟ್ಟು ಬಳಸುವ ಪ್ರಕ್ರಿಯೆಯಾಗಿದೆ. ಮಳೆಕೊಯ್ಲು ಸಿಂಧು ನಾಗರೀಕತೆಯಷ್ಟು ಪ್ರಾಚೀನವಾದದ್ದಾಗಿದೆ. ಆಧುನಿಕವಾಗಿ ಜಲಸಂರಕ್ಷಣೆಯ ಉದ್ದೇಶದಿಂದಾಗಿ ಮಳೆನೀರನ್ನು ಕೊಯ್ಲು ಮಾಡುವುದು ಎಂಬ ಅರ್ಥದಲ್ಲಿ ಬಳಸುವರು.

**ಉಚ್ಚಂಗಿದುರ್ಗ**

ಉಚ್ಚಂಗಿದುರ್ಗ ಗ್ರಾಮವು ವಿಜಯನಗರ ಜಿಲ್ಲಾ ಕೇಂದ್ರದಿಂದ 107 ಕಿ.ಮೀ ದೂರದಲ್ಲಿದೆ. ಹರಪನಹಳ್ಳಿ ತಾಲೂಕು ಕೇಂದ್ರದಿಂದ 29 ಕಿ.ಮೀ ದೂರದಲ್ಲಿ ಉಚ್ಚಂಗಿದುರ್ಗವನ್ನು ಹಲವಾರು ಹೆಸರುಗಳಿಂದ ಕರೆಯುತ್ತಿದ್ದರು ಎಂಬುದಕ್ಕೆ ನಮಗೆ ಶಾಸನಗಳು ಮುಖ್ಯ ಆಕರಗಳಾಗಿವೆ. ಉಚ್ಚಂಗಿದುರ್ಗದ ಹೊಲವೊಂದರಲ್ಲಿರುವ 1070 ಶಾಸನ ಉಚ್ಚಂಗಿದುರ್ಗಕ್ಕೆ ಕೃತಯುಗದಲ್ಲಿ ಮೇಘನಾದ, ತ್ರೈತಾಯುಗದಲ್ಲಿ ಕನಕಗಿರಿ, ದ್ವಾಪರಯುಗದಲ್ಲಿ ಉತ್ತುಂಗ ಪರ್ವತ, ಕಲಿಯುಗದಲ್ಲಿ ಉಚ್ಚಂಗಿ ಎಂಬ ಹೆಸರು ಉಲ್ಲೇಖಿತವಾಗಿದೆ. ಉಚ್ಚಂಗಿದುರ್ಗವು ಬನವಾಸಿ ಕಂದಬರು, ಕಲ್ಯಾಣ ಚಾಲುಕ್ಯರು, ನೊಳಂಬರು, ಪಾಂಡ್ಯರು ಮತ್ತು ಹೊಯ್ಸಳರಿಗೆ ಪ್ರಮುಖ ಕೇಂದ್ರವಾಗಿತ್ತು. ಗ್ರಾಮದ ದಕ್ಷಿಣೋತ್ತವಾಗಿ ಹಬ್ಬಿರುವ ಎರಡು ಬೆಟ್ಟಗಳನ್ನು ಬಳಸಿ ಹಾಸುಬಂಡೆಯ ಮೇಲೆ ಕೋಟೆಯನ್ನು ನಿರ್ಮಿಸಲಾಗಿದೆ.

**ಅರಿಶಿಣ ಹೊಂಡ**

ಬೆಟ್ಟದ ಮೇಲಿರುವ ಉಚ್ಚಂಗಿದೇವಿ ಗುಡಿಯ ಆಗ್ನೇಯಕ್ಕೆ ಇರುವ ಮತ್ತು ಅರಮನೆಯ ಪೂರ್ವಕ್ಕೆ ಹೊಂದಿಕೊಂಡಿರುವುದೇ ಅರಿಶಿಣ ಹೊಂಡ. ಹೊಂಡದಲ್ಲಿನ ನೀರು ಹಸಿರು ಬಣ್ಣದಿಂದ ಪಾಚಿ ಕಟ್ಟಿರುವುದರಿಂದ ಇದನ್ನು ಅರಿಶಿಣ ಹೊಂಡ ಎಂದು ಸ್ಥಳೀಯರು ಕರೆಯುತ್ತಾರೆ. ರಾಜರ ಅರಮನೆಯ ಕೆಳಭಾಗದಲ್ಲಿರುವ ಹೊಂಡವನ್ನು ಬೃಹತ್ ಕಲ್ಲಾಸರೆಗಳನ್ನು ಬಳಸಿಕೊಂಡು ನಿರ್ಮಾಣ ಮಾಡಲಾಗಿದೆ. ರಾಜರು ಮತ್ತು ಅಧಿಕಾರಿಗಳ ಬಳಕೆಗಾಗಿ ಈ ಹೊಂಡವನ್ನು ನಿರ್ಮಿಸಿದ್ದಾರೆ. ಬೃಹತ್ ಬಂಡೆಗಳ ನೈಸರ್ಗಿಕ ಕಲ್ಲಾಸರೆಗಳ ಮಧ್ಯದ ತಗ್ಗಾದ ಪ್ರದೇಶವನ್ನು ಇದಕ್ಕೆ ಬಳಸಿಕೊಂಡಿದ್ದಾರೆ. ಅದರ ಮೇಲೆ ಕಲ್ಲಿನ ಗೋಡೆಯನ್ನು

ಅವಶ್ಯಕತೆಯಿರುವ ಕಡೆ ಅಂದರೆ ಹೊಂಡದ ನೀರು ಕಲ್ಲಾಸರೆಗಳಿಂದ ತುಂಬಿ ಮೇಲ್ಮಟ್ಟದಲ್ಲಿ ಹರಿದು ಹೋಗುವಂತಹ ಸ್ಥಳದಲ್ಲಿ ತಡೆಗೋಡೆ ರೀತಿಯಲ್ಲಿ ಕಲ್ಲಿನ ಕಟ್ಟಡವನ್ನು ನಿರ್ಮಾಣ ಮಾಡಿರುವರು. ಕ್ಷೇತ್ರಕಾರ್ಯದಲ್ಲಿ ಗಮನಿಸಿದಾಗ ಹೊಂಡಕ್ಕೆ ಬೆಟ್ಟದ ಮೇಲೆ ಬಿದ್ದ ಮಳೆ ನೀರು ಹಾಗೂ ರಾಜನ ಅರಮನೆಯ ಅವರಣದಲ್ಲಿ ಬಿದ್ದ ಮಳೆನೀರು ಸಣ್ಣ ಕಾಲುವೆಗಳ ಮೂಲಕ ಸೇರುತ್ತದೆ. ಈ ಕಾಲುವೆಯನ್ನು ಕಲ್ಲು ಮತ್ತು ಗಚ್ಚುಗಾರೆಗಳನ್ನು ಬಳಸಿ ನಿರ್ಮಿಸಲಾಗಿದೆ.

ಹೊಂಡದ ನೀರು ಇಲ್ಲಿಂದ ಕೋಟೆಯ ಕೆಳಭಾಗದಲ್ಲಿರುವ ಹೊಸ ಹೊಂಡಕ್ಕೆ ಹೋಗುತ್ತದೆ ಎಂಬುವುದು ಸ್ಥಳೀಯರ ಅಭಿಪ್ರಾಯವಾಗಿದ್ದು, ಆದರೆ ಕ್ಷೇತ್ರಕಾರ್ಯದಲ್ಲಿ ಗಮನಿಸಿದಾಗ ಯಾವುದೇ ರೀತಿಯ ಕಾಲುವೆ ವ್ಯವಸ್ಥೆ ಇಲ್ಲದಿರುವುದು ಕಂಡುಬರುತ್ತದೆ. ದಕ್ಷಿಣೋತ್ತರವಾಗಿ 50 ಅಡಿ, ಪೂರ್ವ ಪಶ್ಚಿಮವಾಗಿ 20 ಅಡಿಗಳಷ್ಟು ವಿಸ್ತಾರ ಹೊಂದಿದೆ. ಇದು ಸುಮಾರು (ಐದು ಲಕ್ಷ ಒಂದು ಸಾವಿರ) ಲೀಟರ್ ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿದೆ. ಉತ್ತರ ದಿಕ್ಕಿನಲ್ಲಿ ಇಳಿಯಲು 15ಕ್ಕಿಂತ ಹೆಚ್ಚು ಪಾವಟಿಗಳನ್ನು ಹೊಂದಿದ್ದು, ಪಾವಟಿಯ ಹತ್ತಿರ ನಂದಿ ಶಿಲ್ಪ ಮತ್ತು ನಾಗಶಿಲ್ಪ ಕಂಡುಬರುತ್ತದೆ. ಹೊಂಡದ ನೀರನ್ನು ನಿತ್ಯ ದೇವಿಯ ಪೂಜೆಗೆ ಮತ್ತು ಜಾತ್ರೆ, ಹಬ್ಬ ಹರಿದಿನಗಳಲ್ಲಿ ದೇವಿಯ ದರ್ಶನಕ್ಕೆ ಬರುವ ಭಕ್ತರು ಕುಡಿಯುತ್ತಾರೆ. ಇದು ದೇವಿಯ ಹೊಂಡವಾದ್ದರಿಂದ ಇದರ ನೀರಿನ ಬಗ್ಗೆ ಹೀಯಾಳಸಿ ಮಾತನಾಡಿದರೆ ಕೇಡಾಗುವುದು ಎಂಬ ನಂಬಿಕೆ ಇದೆ. ಪ್ರಸ್ತುತ ಹೊಂಡವು ಹೂಳು, ಜಾಲಿ ಮುಳ್ಳುಗಳಿಂದ ಕೂಡಿದ್ದು, ಶಿಥಿಲಾವಸ್ಥೆಯಲ್ಲಿದೆ. ಹೊಂಡದ ಸುತ್ತ ಪ್ರಾಕಾರ ಗೋಡೆ ನಿರ್ಮಿಸಿದ್ದು, ಅದರ ಮೇಲೆ ತಂತಿ ಬೇಲಿಯನ್ನು ಹಾಕಿದ್ದಾರೆ.

**ಆನೆಹೊಂಡ**

ಉಚ್ಚಂಗಿ ಬೆಟ್ಟದ ವಿರೂಪಾಕ್ಷ ದೇವಾಲಯದ ಈಶಾನ್ಯ ಭಾಗಕ್ಕಿರುವುದೇ ಆನೆಹೊಂಡ. ಪಾಳೆಯಗಾರರ ಕಾಲದಲ್ಲಿ ಆನೆಗಳಿಗೆ ನೀರು ಕುಡಿಯಲಿಕ್ಕೆ ಮತ್ತು ಸ್ನಾನಕ್ಕೆ ಹೊಂಡವನ್ನು ನಿರ್ಮಿಸಲಾಗಿದೆ ಎಂದು ಸ್ಥಳೀಯರ ಅಭಿಪ್ರಾಯ. ಈ ಹೊಂಡಕ್ಕೂ ದೈವಿಕ ಮಹತ್ವವಿದೆ. ಪ್ರತಿ ಹುಣ್ಣಿಮೆಯ ರಾತ್ರಿ ಇಲ್ಲಿ ಉಚ್ಚಂಗೆಮ್ಮದೇವಿಗೆ ಪೂಜಾ ಕಾರ್ಯಗಳು ಜರುಗುತ್ತವೆ. ದಾದಯ್ಯನಾಯಕನ ರಾಣಿ ಹೊನ್ನವ್ವನಾಗತಿ ಹೊಂಡದ ಕಟ್ಟೆಯ ಮೇಲೆ ಕುಳಿತು. ವಿಶ್ರಾಂತಿ ಪಡೆಯುತ್ತಿದ್ದಳೆಂದು ಪ್ರತೀತಿ ಇದೆ.

**ಹೊಂಡದ ರಚನೆ**

ಹೊಂಡವು ಪೂರ್ವ ಪಶ್ಚಿಮವಾಗಿ 80 ಅಡಿ ಅಗಲ, ದಕ್ಷಿಣೋತ್ತರವಾಗಿ 70 ಅಡಿ ಉದ್ದವಿದ್ದು, ಸು.30 ಅಡಿ ಆಳವಿದ್ದು, ಇದು ಸುಮಾರು (ನಾಲ್ಕು ಕೋಟಿ ಏಪ್ಪತ್ತೈದು ಲಕ್ಷ ಲೀಟರ್) ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿದೆ. ನೀರನ್ನು ವರ್ಷಪೂರ್ತಿ ಸಂಗ್ರಹಿಸುವ ಉದ್ದೇಶದಿಂದ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿನಲ್ಲಿ ನೈಸರ್ಗಿಕ ಕಲ್ಲುಗಳನ್ನು ಬಳಸಿ ಎಲ್ ಆಕಾರದ ತಡೆಗೋಡೆಯನ್ನು ನಿರ್ಮಿಸಿದ್ದಾರೆ. ದಕ್ಷಿಣ ದಿಕ್ಕಿನಲ್ಲಿ ವಿ ಆಕಾರದ ಪಾವಟಿಗಳನ್ನು ನಿರ್ಮಿಸಲಾಗಿದೆ. ಪೂರ್ವದಿಕ್ಕಿಗೆ ಬೃಹತ್ ಬಂಡೆಗಲ್ಲು ಇಳಿಜಾರು ರೀತಿಯಲ್ಲಿದ್ದು, ಇದರ ಮೇಲೆ ಬಿದ್ದ ಮಳೆನೀರು ಹಾಗೂ ಬಟ್ಟಲು ಬಾವಿಯ ಹೆಚ್ಚಾದ ನೀರು ತೊಟ್ಟಿಲು ಬಾವಿಯ ಕಾಲುವೆ ಮೂಲಕ ಆನೆಹೊಂಡಕ್ಕೆ ಹರಿಸಲಾಗಿದೆ. ಇಲ್ಲಿಂದ ಹೋನ್ನೆಝುರಿ ಹೊಂಡಕ್ಕೆ ಸೇರುತ್ತದೆ. ಹೊಂಡದ ಪಕ್ಕದಲ್ಲಿ ನಾಗಶಿಲ್ಪಗಳು ಮತ್ತು ಆನೆಶಿಲ್ಪಗಳು ಕಂಡುಬರುತ್ತದೆ. ಹೊಂಡದ ಸುತ್ತ ಪ್ರಾಕಾರ ಗೋಡೆ ನಿರ್ಮಿಸಿದ್ದು, ಅದರ ಮೇಲೆ ತಂತಿ ಬೇಲಿಯನ್ನು ಹಾಕಿದ್ದಾರೆ.

**ಹೊನ್ನೆಝುರಿ ಹೊಂಡ**

ಉಚ್ಚಂಗಿ ಬೆಟ್ಟದ ಆಗ್ನೇಯದಲ್ಲಿ ಬೃಹದಾಕಾರದ ಬಂಡೆಯ ಕೆಳಗೆ ಕಂಡುಬರುವುದೇ ಹೊನ್ನೆಹೊಂಡ. ಚಿತ್ರದುರ್ಗದ ಚಿಕ್ಕಣ್ಣನಾಯಕ ಉಚ್ಚಂಗಿ ದುರ್ಗದ ಮೇಲೆ ದಂಡೆತ್ತಿ ಬಂದಾಗ ಹರಪನಹಳ್ಳಿಯ ಮೊದಲ ಪಾಳೆಗಾರನಾದ ದಾದಯ್ಯ ನಾಯಕನು ತನ್ನ ಬಲವಾದ ಸೈನ್ಯದೊಂದಿಗೆ ಹಿಮ್ಮೆಟಿಸಿದನಂತೆ ಜಕ್ಕಣ್ಣನಾಯಕ ನಮ್ಮ ಮೇಲೆ ದಂಡೆತ್ತಿ ಬರಲು ನನ್ನ ಹೆಂಡತಿ ಹೊನ್ನನಾಗತಿಯೇ ಕಾರಣ ಇರಬೇಕೆಂದು ಅನುಮಾನಿಸಿದ ದಾದಯ್ಯನಾಯಕನು ನಾಡಿಗೆ ಯಾರೇ ದ್ರೋಹ ಬಗೆಯಲಿ ಅವರಿಗೆ ಶಿಕ್ಷೆ ಕೊಡಬೇಕೆಂದು ಸೇವಕರನ್ನು ಕರೆದು ತನ್ನ ರಾಣಿ ಹೊನ್ನವ್ವ ನಾಗತಿಯನ್ನು ಬೆಟ್ಟದ ಆಗ್ನೇಯ ಭಾಗದ ಬತೇರಿಯಿಂದ ಕೆಳಕ್ಕೆ ನೂಕಿಸಿದನಂತೆ. ರಾಣಿ ಹೊನ್ನಮ್ಮನ ಮರಣದ ಅಪಕೀರ್ತಿ ತನ್ನ ಮೇಲೆ ಬರಬಾರದೆಂದು ರಾಣಿ ಹೂಡೆವಿನಿಂದ ಜಾರಿ ಬಿದ್ದಳೆಂಬ ಸುದ್ದಿ ಹರಡುವಂತೆ ನೋಡಿಕೊಂಡನಂತೆ, ಆದ್ದರಿಂದ ಈ ಸ್ಥಳಕ್ಕೆ ಹೊನ್ನಮ್ಮ ಜಾರಿದ ಬಂಡೆಯೆಂದು ಅಥವಾ ಹೊನ್ನೆಝುರಿ ಎಂದು ಸ್ಥಳೀಯರ ಅಭಿಪ್ರಾಯ. ಹೊನ್ನಮ್ಮ ಕೆಳಗೆ ಬೀಳುವಾಗ ಉಚ್ಚಂಗಿದುರ್ಗದವರಿಗೆ ಗಂಡು ಹೆಚ್ಚಬೇಡ, ಚಿತ್ರದುರ್ಗದವರಿಗೆ ಹೆಣ್ಣು ಹೆಚ್ಚಬೇಡ ಎಂದು ಶಾಪ ಕೊಟ್ಟಳಂತೆ. ಉಚ್ಚಂಗೆಮ್ಮನ ದೇವಾಲಯದಲ್ಲಿರುವ ಘಂಟೆ ಶಾಸನದಲ್ಲಿ 'ಹೊನ್ನನಾಗತಿ' ಉಲ್ಲೇಖ ಬರುವುದಲ್ಲದೆ. ಈಕೇ ಯಾರೆಂಬುದು ಸ್ಪಷ್ಟವಾಗಿದೆ.

**ಹೊಂಡದ ರಚನೆ**

ಹೊಂಡಕ್ಕೆ ಬೆಟ್ಟದ ಮೇಲೆ ಬಿದ್ದ ಮಳೆನೀರು ಬಟ್ಟಲು ಬಾವಿಯಿಂದ ತೊಟ್ಟಿಲು ಬಾವಿಯ ಮೂಲಕ ಆನೆಹೊಂಡಕ್ಕೆ ಸೇರುತ್ತದೆ. ಇಲ್ಲಿಂದ ಹೊನ್ನೆಹೊಂಡಕ್ಕೆ ನೀರು ಹರಿಯುವುದರಿಂದ ನೀರನ್ನು ಸಂಗ್ರಹಿಸಲು ನೈಸರ್ಗಿಕ ಕಲ್ಲಾಸರೆಗಳ ಮುಖಾಂತರ ಉತ್ತರ ದಿಕ್ಕು ಮತ್ತು ಪಶ್ಚಿಮ ದಿಕ್ಕಿನಲ್ಲಿ ತಡೆಗೋಡೆಯನ್ನು ನಿರ್ಮಿಸಿಲಾಗಿದೆ. ಇದರ ಹೆಚ್ಚಾದ ನೀರು ಉತ್ತರ ದಿಕ್ಕಿನಲ್ಲಿರುವ ಕಾಲುವೆ ಮೂಲಕ ಕಂದಕಕ್ಕೆ ಹೋಗಿ ಸೇರುತ್ತದೆ. ಹೊಂಡವು ಪೂರ್ವ ಪಶ್ಚಿಮವಾಗಿ 50 ಅಡಿ ಅಗಲ, ಉತ್ತರ ದಕ್ಷಿಣವಾಗಿ 65 ಅಡಿ ಉದ್ದವಿದ್ದು, 25 ಅಡಿ ಆಳ, ಅಂದಾಜು (18,00.000 ಲೀಟರ್) ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೊಂದಿದೆ. ನೈಸರ್ಗಿಕ ಬೆಟ್ಟದ ಕೆಳಗೆ ತಗ್ಗಾದ ಪ್ರದೇಶದಲ್ಲಿ ನಿರ್ಮಿಸಲಾಗಿದ್ದು, ಹೊಂಡದ ಪಕ್ಕದಲ್ಲಿ ನಾಗಶಿಲ್ಪಗಳು ಮತ್ತು ದೇವಾಲಯಗಳು ಕಂಡುಬರುತ್ತದೆ. ಇವುಗಳ ದೇವತಾ ಕಾರ್ಯಗಳ ಬಳಕೆಗಾಗಿ ನಿರ್ಮಿಸಲಾಗಿದೆ. ಪ್ರಸ್ತುತ ಹೊಂಡವು ಹೂಳು, ಜಾಲಿ ಮುಳ್ಳುಗಳಿಂದ ಕೂಡಿದ್ದು, ಶಿಥಿಲಾವಸ್ಥೆಯಲ್ಲಿದೆ. ಇಲ್ಲಿರುವ ಪ್ರಾಣಿ ಪಕ್ಷಿಗಳಿಗೆ ಹೊಂಡದ ನೀರು ಆಸರೆಯಾಗಿದೆ.

**ಉಚ್ಚಂಗಿದುರ್ಗ ಕೋಟೆ ಕಂದಕ**

ಶತೃಗಳಿಂದ ರಕ್ಷಣೆಯನ್ನು ಪಡೆಯುವುದೇ ಕೋಟೆಗಳ ನಿರ್ಮಾಣದ ಮೂಲ ಉದ್ದೇಶ. ಶತೃಗಳ ಹಾವಳಿ, ಅವಶ್ಯಕತೆಗಳ ಹೆಚ್ಚಳ ಮತ್ತು ರಾಜ್ಯವು ವಿಸ್ತಾರವಾಗುತ್ತಾ ಹೋದಂತೆ ಕೋಟೆಯ ಸುತ್ತುಗಳು ಬೆಳೆದಿವೆ. ಆಡಳಿತದ ಪ್ರಮುಖ ಕೇಂದ್ರವಾಗಿದ್ದ ಉಚ್ಚಂಗಿ ಕೋಟೆಯು ಹಲವು ಬಾರಿ ದುರಸ್ಥಿಯೊಂದಿಗೆ, ಹೊಸ ಸುತ್ತುಗಳನ್ನು ಹೊಂದಿದೆ. ಪಾಳೆಯಗಾರರ ಅವಧಿಯಲ್ಲಿ ದಾದಯ್ಯ ನಾಯಕನು ಉಚ್ಚಂಗಿದುರ್ಗದ ಕೋಟೆಯನ್ನು ಬಲಪಡಿಸಿಕೊಂಡು ಪ್ರಬಲನಾಗಿದ್ದನು. ಸ್ಥಳೀಯರು ಇದು ಏಳು ಸುತ್ತಿನ ಕೋಟೆ ಎಂದು ಅಭಿಪ್ರಾಯ. ಡಾ.ಸಿ.ಎಸ್.ಪಾಟೀಲರ ರೀತ್ಯಾ ಅವರು ಈ ಕೋಟೆವು ಹಲವು ಸುತ್ತುಗಳನ್ನು ಒಳಗೊಂಡಿತ್ತು ಎಂದಿದ್ದಾರೆ. ಕದಂಬರಿಂದ ಹರಪನಹಳ್ಳಿ ಪಾಳೆಯಗಾರರ ವರೆಗೆ ಉಚ್ಚಂಗಿ ಕೋಟೆಯನ್ನು ಆಳ್ವಿಕೆ ಮಾಡಿರುವುದನ್ನು ಅವರು ನಿರ್ಮಿಸಿದ ದೇವಾಲಯಗಳು, ಶಾಸನಗಳು, ಕೆರೆ ಮತ್ತು ಬಾವಿಗಳಿಂದ ಸ್ಪಷ್ಟವಾಗುತ್ತದೆ. ಉಚ್ಚಂಗಿ ಕೋಟೆಯು ವಿಸ್ತಾರವಾಗಿದ್ದು ಹಲವು ಸುತ್ತುಗಳನ್ನು ಒಳಗೊಂಡಿದೆ.

ಕೋಟೆಯ ಪಶ್ಚಿಮ ಭಾಗದ ಇಳಿಜಾರಾಗಿರುವ ಬೆಟ್ಟದಲ್ಲಿ ಕಂದಕವನ್ನು ನಿರ್ಮಾಣ ಮಾಡಿದ್ದಾರೆ. ಕಂದಕವು ಪೂರ್ವ ದಿಕ್ಕಿನಿಂದ ಪಶ್ಚಿಮ ದಿಕ್ಕಿನ ಕಡೆಗೆ 30 ಅಡಿ ಅಗಲವಿದ್ದು, ನಂತರ 60 ಅಡಿ ಅಗಲದ ವಿಸ್ತೀರ್ಣದಲ್ಲಿ ಕಂದಕವನ್ನು ವ್ಯವಸ್ಥಿತವಾಗಿ ತಂತ್ರಜ್ಞಾನದ ಮೂಲಕ ನಿರ್ಮಾಣ ಮಾಡಲಾಗಿದೆ. ಕಂದಕದಲ್ಲಿ ಕನಿಷ್ಠ 20 ಅಡಿ ಆಳದಲ್ಲಿ ನೀರು ನಿಲ್ಲುವ ವ್ಯವಸ್ಥೆಯನ್ನು ಕಲ್ಪಿಸಿರುವರು. ಎರಡು ಬದಿಯಲ್ಲಿ ಕಲ್ಲಿನ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಈ ಕಟ್ಟಡ ನಿರ್ಮಾಣ ಮಾಡಿರುವುದರಿಂದ ಕಂದಕದ ತಳ ಹಂತದ ಮಣ್ಣು ಕುಸಿಯುವುದನ್ನು ತಪ್ಪಿಸಿದ್ದಾರೆ.

ಕೋಟೆಯ ಸುತ್ತಲೂ ಕಂದಕ ಇರುವುದರಿಂದ ಇದಕ್ಕೆ ನೀರು ಹರಿಸಿರುವ ವ್ಯವಸ್ಥೆಯು ಸರಪಳಿಯಾಕಾರದಲ್ಲಿದೆ. ಪೂರ್ವದಿಕ್ಕಿನಲ್ಲಿರುವ ಬಟ್ಟಲ ಬಾವಿಯಿಂದ ತೊಟ್ಟಿಲು ಬಾವಿಯ ಮೂಲಕ ಆನೆಹೊಂಡಕ್ಕೆ ನೀರನ್ನು ಹರಿಸಲಾಗಿದೆ. ಇಲ್ಲಿಂದ ಹೊನ್ನೆಜರಿ ಹೊಂಡದ ಕಾಲುವೆಯ ಮೂಲಕ ಕಂದಕಕ್ಕೆ ಬಿಡಲಾಗಿದೆ. ಉತ್ತರ ದಿಕ್ಕಿನಲ್ಲಿರುವ ಅರಿಶಿಣ ಹೊಂಡದ ಹೆಚ್ಚಾದ ನೀರು ಕಾಲುವೆಯ ಮೂಲಕ ಕಂದಕಕ್ಕೆ ಹರಿಸಲಾಗಿದೆ.

ಈ ಕಂದಕದ ನೀರನ್ನು ಪುನರ್ ಬಳಕೆಗಾಗಿ ಮತ್ತು ಇತರೆ ಸಂಗ್ರಹಕಾರಕಗಳಿಗೆ ಬಳಸದೇ ಕೇವಲ ಕೋಟೆಯ ರಕ್ಷಣಾ ದೃಷ್ಟಿಯಿಂದಾಗಿ ನಿರ್ಮಾಣ ಮಾಡಲಾಗಿದೆ. ವಿಷಯುಕ್ತ ಜಲಚರಗಳನ್ನು ಈ ಕಂದಕದಲ್ಲಿ ಬಿಡುವ ಮೂಲಕ ಶತ್ರುಗಳಿಗೆ ತಡೆಯೊಡ್ಡುತ್ತಿದ್ದುದ್ದನ್ನು ಕಾಣಬಹುದಾಗಿದೆ. ಹಾಗಾಗಿ ಈ ಕಂದಕದ ಹೆಚ್ಚುವರಿ ನೀರನ್ನು ಬೇರೆ ಕಡೆ ಹಾಯಿಸದೇ ಅವಶ್ಯಕತೆಗೆ ತಕ್ಕಂತೆ ಈ ಕಂದಕಕ್ಕೆ ನೀರನ್ನು ಹರಿಸಲಾಗುತ್ತಿತ್ತು. ಕೋಟೆಯ ಕಂದಕವು ಉತ್ತರ ದಕ್ಷಿಣವಾಗಿ 400 ಮೀ ಉದ್ದವಿದ್ದು, ಇದನ್ನು ನೈಸರ್ಗಿಕವಾಗಿ ಸಿಗುವ ಕಲ್ಲು ಮತ್ತು ಮಣ್ಣನ್ನು ಬಳಸಿ ಕಟ್ಟಲಾಗಿದೆ.

**ಅರಸನ ಬಾವಿ**

ಉಚ್ಚಂಗಿದುರ್ಗ ಗ್ರಾಮವು ಹರಪನಹಳ್ಳಿ ತಾಲೂಕಿನ ಕೇಂದ್ರದಿಂದ 25 ಕಿ.ಮೀ ದೂರದಲ್ಲಿದೆ. ಗ್ರಾಮದಿಂದ ದಾವಣಗೆರೆಗೆ ಹೋಗುವ ರಸ್ತೆಯ ಎಡ ಪಾರ್ಶ್ವದಲ್ಲಿ ಬಸ್ ನಿಲ್ದಾಣದಿಂದ ಸಮೀಪದಲ್ಲಿರುವುದೆ ಅರಸನ ಬಾವಿ. ಇದನ್ನು ಪಾಳೆಯಗಾರರು ನಿರ್ಮಿಸಿದ್ದಾರೆ ಎಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಆದರೆ ಬಾವಿಯ ರಚನೆ ಗಮನಿಸಿದರೆ ಇದು ವಿಜಯನಗರ ಕಾಲದಲ್ಲಿ ನಿರ್ಮಿಣವಾಗಿದೆ ಎಂದು ಹೇಳಬಹುದು. ಬಾವಿಯನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ್ದು, ಚೌಕಾಕಾರವಾಗಿದೆ. 80 ಮೀಟರ್ ಅಗಲ, 60 ಮೀ ಮೀಟರ್ ಉದ್ದ ಮತ್ತು 25, ಮೀ ಆಳವಿದ್ದು, ಸುಮಾರು 5,12000 (ಐದು ಲಕ್ಷದ ಹನ್ನೆರಡು ಸಾವಿರ) ಲೀಟರ್ ನೀರಿನ ಸಂಗ್ರಹಣಾ ಸಾಮರ್ಥ್ಯ ಹೊಂದಿದೆ. ಬಾವಿಯ ಸುತ್ತಲೂ ಸೋಪಾನಗಳನ್ನು ಅಳವಡಿಸಲಾಗಿದೆ. ಪೂರ್ವ ಪಶ್ಚಿಮ ಮತ್ತು ಉತ್ತರ ದಕ್ಷಿಣೋತ್ತರವಾಗಿ ನಾಲ್ಕು ದಿಕ್ಕಿನಲ್ಲಿ ಮೆಟ್ಟಿಲುಗಳನ್ನು ಹೊಂದಿದೆ. ಪೂರ್ವ ದಿಕ್ಕಿನಲ್ಲಿ ಪ್ರವೇಶ ದ್ವಾರವನ್ನು ಹೊಂದಿದ್ದು, 20 ಕ್ಕಿಂತ ಹೆಚ್ಚು ಮೆಟ್ಟಿಲುಗಳನ್ನು ಹೊಂದಿದೆ. ಬಾವಿಯ ಕೆಳಭಾಗಕ್ಕೆ ಹೋದಂತೆ ಅಗಲವು ಕಿರಿದಾಗುತ್ತ ಹೋಗುತ್ತದೆ. ಇದರ ಪೂರ್ವಭಾಗದಲ್ಲಿ ಮೆಟ್ಟಿಲಿನ ಮೇಲ್ಭಾಗದಲ್ಲಿ ಗಣೇಶನ ವಿಗ್ರಹವೂ ಇದ್ದು ಸ್ವಲ್ಪ ಮುಂದೆ ಅಜ್ಜನ ಮಠವೆಂದು ಕರೆಯಲ್ಪಡುವ ಸಮಾಧಿ ಇದೆ. ಇದರ ಸುತ್ತಲಿನ ಜನತೆ ಈ ನೀರನ್ನು ಬಳಸುತ್ತಾರೆ.

**ಘಂಟಿನ ಕೆರೆ**

ಹರಪನಹಳ್ಳಿ ತಾಲೂಕಿನ ಕೇಂದ್ರದಿಂದ 30 ಕಿ.ಮೀ ದೂರದಲ್ಲಿದೆ. ಇದು ಉಚ್ಚಂಗಿದುರ್ಗದಿಂದ ದಾವಣಗೆರೆಗೆ ಹೋಗುವ ರಸ್ತೆಯ ಬಲ ಪಾರ್ಶ್ವದಲ್ಲಿ ಕೋಟೆಯ ದಕ್ಷಿಣಕ್ಕೆ ಇರುವುದೇ ಘಂಟಿನ ಕೆರೆ. ಇದನ್ನು ಸ್ಥಳೀಯರು ಚಿಕ್ಕಹೊಂಡ, ಸಿಗೇ ಹೊಂಡ ಎಂದು ಕರೆಯುತ್ತಾರೆ. ಆದರೆ ಹೊಂಡವನ್ನು ಗಮನಿಸಿದಾಗ ಪೂರ್ವದಿಕ್ಕಿನಲ್ಲಿ ಏರಿಯನ್ನು


ಹೊಂದಿದ್ದು, ಇದನ್ನು ಕೆರೆ ಎಂದು ಹೇಳಬಹುದು. ಕ್ರಿ.ಶ 1070ರ ಶಾಸನ ನೊಳಂಬರಾಜನಾದ ನೊಂಳಬಪಲ್ಲವ ಪೆರ್ಮಾಡಿದೇವನು ಉಚ್ಚಂಗಿದುರ್ಗದ ಮೇಲಿರುವ ತ್ರೈಲೇಶ್ವರ ದೇವರಿಗೆ ಗಂಟಿನ ಕೆರೆಯನ್ನು ದತ್ತಿ ನೀಡುತ್ತಾನೆ ಎಂಬುವುದನ್ನು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ ಕೆರೆಯೇ ಇಂದು ಚಿಕ್ಕಹೊಂಡವಾಗಿದೆ ಎಂಬುವುದು ಕ್ಷೇತ್ರಕಾರ್ಯದ ಮೂಲಕ ಗುರುತಿಸಲಾಗಿದೆ. ಪಾಳೆಗಾರರು ಇದರ ಜೀರ್ಣೋದ್ಧಾರ ಮಾಡಿರುವ ಕುರುಹುಗಳಿವೆ. ಕೆರೆಯು ಮೂನ್ನೂರು ಅಡಿ ಉದ್ದಗಲವನ್ನು ಹೊಂದಿದೆ. ಕೆರೆಗೆ ಬೆಟ್ಟದ ಮೇಲೆ ಬಿದ್ದ ಮಳೆನೀರು ವ್ಯರ್ಥವಾಗದಂತೆ ಕೆರೆಯಲ್ಲಿ ಶೇಖರಣೆ ಮಾಡಲು ಪೂರ್ವದಿಕ್ಕಿನಲ್ಲಿ 800 ಮೀಟರ್ ಉದ್ದದ ಏರಿಯನ್ನು ನಿರ್ಮಿಸಲಾಗಿದೆ. ಏರಿಯ ಹಿಂಭಾಗದಲ್ಲಿ 12ನೇ ಶತಮಾನದಲ್ಲಿ ನಿರ್ಮಾಣವಾದ ನೊಣೇಶ್ವರ ದೇವಾಲಯ ಮತ್ತು ಶಾಸನೋಕ್ತ ವೀರಗಲ್ಲು ಕಂಡುಬರುತ್ತದೆ. ಸದಾ ನೀರಿನಿಂದ ತುಂಬಿರುವ ಕೆರೆಯು ಪ್ರಾಚೀನ ಕಾಲದಿಂದ ಇಂದಿನವರೆಗೂ ಇಲ್ಲಿನ ಜನರ ದಾಹವನ್ನು ಇಂಗಿಸಿದ ಜೀವಸೆಲೆಯಾಗಿದೆ. ಪ್ರಸ್ತುತ ಕೆರೆಯು ಶಿಥಿಲಾವಸ್ಥೆಯಲ್ಲಿದೆ.

**ಪರಾಮರ್ಶನ ಗ್ರಂಥಗಳು**


- ವಾಸುದೇವ ಬಡಿಗೇರ. (2012). *ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಮಹದೇವ ಸಿ. ವಾಸುದೇವನ್. *ವಾಸುದೇವ ಬಡಿಗೇರ.* ರಮೇಶ ನಾಯಕ, ಸೋಮಶೇಖರ್ ಎಸ್.ವೈ. (2020). *ಕರ್ನಾಟಕ ದೇವಾಲಯ ಕೋಶ–ದಾವಣಗೆರೆ ಜಿಲ್ಲೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ದೇವರಕೊಂಡಾರೆಡ್ಡಿ, (ಸಂ.). (1998). *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : 1,* *ಬಳ್ಳಾರಿ ಜಿಲ್ಲೆ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
- ಕೊಟ್ರೇಶ್. ಎಂ. *ಐತಿಹಾಸಿಕ ಧಾರ್ಮಿಕ ಶ್ರೀ ಕ್ಷೇತ್ರ ಉಚ್ಚಂಗಿದುರ್ಗ*
- ಕೊಟ್ರೇಶ್ ಎಂ, (2010). *ಹರಪನಹಳ್ಳಿ ತಾಲೂಕಿನ ರಕ್ಷಣಾ ಸ್ಮಾರಕಗಳು.* ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಕೊಟ್ರೇಶ್ ಎಂ, (2011). *ಬಳ್ಳಾರಿ ಜಿಲ್ಲೆಯ ಕೋಟೆಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

# ಛಾಯಾಚಿತ್ರಗಳು

## ಉಚ್ಚಂಗಿದುರ್ಗ ಕೋಟೆ ಪರಿಸರದ ಮಳೆಕೊಯ್ಲು ವ್ಯವಸ್ಥೆ





ಆನೆಹೊಂಡ



ತೊಟ್ಟಿಲು ಬಾವಿ



ಹೊನ್ನೆರ್ಘುರಿ ಹೊಂಡ



ಕಂದಕ